# "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ"

ದಿನಾಂಕ: 12.03.2024 ರಂದು **ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ** ಹಾಗೂ **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ** ಇವರ ಸಂಯುಕ್ತ ಆಶ್ರಯದಲ್ಲಿ **"ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ–2024"** ಕಾರ್ಯಕ್ರಮವನ್ನು ಆಯೋಜಿಸಲಾಯಿತು, ಈ ಕಾರ್ಯಕ್ರಮದಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ **ಡಾ. ಸಹನಾ ರಾವ್,** ಸ್ತ್ರೀ ರೋಗ ತಜ್ಞೆ, ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ, ಬಾಗಲಕೋಟೆ ಮತ್ತು ಇತರ ಗಣ್ಯರು **"ರೈತ ಮಹಿಳೆಗೆ ಫಲ,ಪುಷ್ಪ ತಾಂಬೂಲಗಳನ್ನು"** ನೀಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಂದುವರೆದು, ಉದ್ಘಾಟಕರ ಭಾಷಣ ಮಾಡಿದ **ಡಾ. ಸಹನಾ ರಾವ್,** ಸ್ತ್ರೀ ರೋಗ ತಜ್ಞೆ, ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ, ಬಾಗಲಕೋಟೆ ರವರು, ಮಹಿಳೆಯರು ತಮ್ಮ ಕುಟುಂಬದ ಸದಸ್ಯರ ಆರೋಗ್ಯದ ಬಗ್ಗೆ ಚಿಂತನೆ ಮಾಡುತ್ತ ತಮ್ಮ ಆರೋಗ್ಯದ ಕಡೆಯೂ ಹೆಚ್ಚಿನ ಗಮನ ಕೊಡಬೇಕು ಮತ್ತು ಕುಟುಂಬದಲ್ಲಿ ಮಹಿಳೆಯರ ಪಾತ್ರ ತುಂಬಾ ಮಹತ್ವದಾಗಿರುವುದರಿಂದ ಮಕ್ಕಳಲ್ಲಿ ಉತ್ತಮ ಸಂಸ್ಕಾರವನ್ನು ತುಂಬುವ ಮನಸ್ಥಿತಿಯನ್ನು ಹೊಂದಿರಬೇಕೆಂದು ತಿಳಿಹೇಳಿದರು. ಅದರಂತೆ, ಇಂದು ಮಕ್ಕಳನ್ನು ತಪ್ಪು ಹಾದಿಗೆ ಎಳೆಯುತ್ತಿರುವ ಸಾಮಾಜಿಕ ಜಲತಾಣಗಳು ಹಾಗೂ ಅತಿಯಾದ ಮೊಬೈಲ್ ಬಳಕೆಯಿಂದ ದೂರವಿರುವಂತೆ ಕರೆನೀಡಿದರು.

ಅದರಂತೆ, ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದಂತಹ **ಡಾ. ಟಿ.ಬಿ.ಅಳ್ಳೊಳ್ಳಿ,** ಕುಲಸಚಿವರು, ತೋ.ವಿ.ವಿ. ಹಾಗೂ ಸದಸ್ಯ ಕಾರ್ಯದರ್ಶಿಗಳು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ಮಾತನಾಡಿ, ಮಹಿಳೆಯರು ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳುವುದರ ಮೂಲಕ ಅಂಧಶ್ರದ್ಧೆ ಹಾಗೂ ಮೂಢನಂಬಿಕೆ ನಿರ್ಮೂಲನೆಯಲ್ಲಿ ಹೆಚ್ಚಿನ ಪಾತ್ರವನ್ನು ವಹಿಸುವಂತವರಾಗಬೇಕೆಂದು ಕರೆ ನೀಡಿದರು.

ಅದರಂತೆ, ಕಾರ್ಯಕ್ರಮದ ಅಧ್ಯಕ್ಷರಾಗಿ ಆಗಮಿಸಿದಂತಹ **ಡಾ.ವಿಷ್ಣುವರ್ಧನ,** ಗೌರವಾನ್ವಿತ ಕುಲಪತಿಗಳು, ತೋ.ವಿ.ವಿ. ಹಾಗೂ ಅಧ್ಯಕ್ಷರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ಮಾತನಾಡಿ, ಹೆಣ್ಣುಮಕ್ಕಳಿಗೆ ಸಮಾಜದಲ್ಲಿ ಗೌರವಯುತವಾದ ಸ್ಥಾನಮಾನವನ್ನು ನೀಡಬೇಕು ಹಾಗೂ ಸ್ವಸಾಮರ್ಥ್ಯದಿಂದ ಮುಂದೆ ಬರುವ ಮಹಿಳೆಯರನ್ನು ಗುರುತಿಸಿ ಸೂಕ್ತರೀತಿಯಲ್ಲಿ ಸನ್ಮಾನಿಸಬೇಕೆಂದು ತಿಳಿಸಿದರು. ಮುಂದುವರೆದು, ಸಾಧಕ ಮಹಿಳೆಯರು ಇತರೇ ಮಹಿಳೆಯರಿಗೆ ಮಾದರಿಯಾಗಬೇಕೆಂದು ತಿಳಿಸಿದರು.

ಮುಂದುವರೆದು, ಕಾರ್ಯಕ್ರಮದ ಅಂಗವಾಗಿ ನಿಸರ್ಗ ಸ್ವೀಟ್ಸ್‌ನ ಸಂಸ್ಥಾಪಕಿ ಮತ್ತು ಮಹಿಳಾ ಉದ್ಯಮಿಯಾದ **ಶ್ರೀಮತಿ ಮಂಜುಳಾ ಪಾಟೀಲ** ಅವರನ್ನು **"ಅತ್ಯುತಮ ಮಹಿಳಾ ಸಾಧಕಿ"** ಎಂದು ಗುರುತಿಸಿ ಸನ್ಮಾನಿಸಲಾಯಿತು.

**ಮುಂದುವರೆದು,** ಸದರಿ ಕಾರ್ಯಕ್ರಮದಲ್ಲಿ, **ಡಾ.ಎನ್.ಕೆ.ಹೆಗಡೆ,** ಶಿಕ್ಷಣ ನಿರ್ದೇಶಕರು, **ಡಾ. ಲಕ್ಷ್ಮೀನಾರಾಯಣ ಹೆಗಡೆ,** ವಿಸ್ತರಣಾ ನಿರ್ದೇಶಕರು, **ಡಾ.ರಾಮಚಂದ್ರ ನಾಯಕ್,** ಡೀನ್ ವಿದ್ಯಾರ್ಥಿ ಕಲ್ಯಾಣ, **ಡಾ. ರವೀಚಿದ್ರ ಮುಲಗೆ,** ಡೀನ್ (ಸ್ನಾತಕೋತ್ತರ), **ಡಾ. ಆನಂದ ಮಾಸ್ತಿಹೊಳೆ,** ವಿಶೇಷಾಧಿಕಾರಿಗಳು, ಪಿ.ಪಿ.ಎಮ್.ಸಿ., **ಡಾ.ರವೀಚಿದ್ರ ಜಾವಡಗಿ,** ಪ್ರಭಾರಿ ಡೀನ್, ತೋ.ಮ.ಬಾಗಲಕೋಟೆ, **ಡಾ. ರಾಜಶೇಖರ,** ನಿಯಂತ್ರಕರು, ಬಾಹ್ಯ ಪರೀಕ್ಷಾ ವಿಭಾಗ, **ಡಾ. ಶಶಿಕುಮಾರ, ಎಸ್.** ವಿಸ್ತರನಾ ಮುಂದಾಳು, **ಶ್ರೀಮತಿ ಶಾಂತಾ ಕಡಿ,** ಹಣಕಾಸು ನಿಯಂತ್ರಣಾಧಿಕಾರಿಗಳು, **ಶ್ರೀ ಈರಣ್ಣಾ ಬುಳ್ಳಾ,** ಕ್ಯೂರೇಟರ್, **ಶ್ರೀ ಆಸೀಫ ಬಾಗವಾನ,** ತಾಂತ್ರಿಕ ಸಹಾಯಕರು, ಹಾಗೂ **ಶ್ರೀ ಗಂಗನಗೌಡ ಪಾಟೀಲ,**ದ್ವಿ.ದ.ಸ. ಉ.ಪ್ರಾ.ವಿ.ಕೇಂದ್ರ ಬಾಗಲಕೋಟೆ, ಮಹಿಳಾ ನೌಕರರ ಪ್ರತಿನಿಧಿ ಮತ್ತು ಇನ್ನುಳಿದ ಬೋಧಕ–ಬೋಧಕೇತರ ಸಿಬ್ಬಂದಿಗಳು ಭಾಗವಹಿಸಿದ್ದರು.

ಅದರಂತೆ, ಸದರಿ ಕಾರ್ಯಕ್ರಮದಲ್ಲಿ **ಶ್ರೀಮತಿ ಜ್ಯೋತಿ ಡಂಬಳ** ಪ್ರಾರ್ಥಿಸಿದರು, **ಡಾ.ಭುವನೇಶ್ವರಿ** ಸ್ವಾಗತಿಸಿದರು, **ಶ್ರೀಮತಿ ಶಾಂತಾ ಕಡಿ,** ಪ್ರಾಸ್ತಾವಿಕ ನುಡಿಗಳನ್ನಾಡಿದರು, **ಶ್ರೀಮತಿ ಕೌಸರಬಾನು** ಮತ್ತು **ಶ್ರೀಮತಿ ರೇಣುಕಾ** ಕಾರ್ಯಕ್ರಮವನ್ನು ನಿರೂಪಿಸಿದರು **ಹಾಗೂ ಶ್ರೀಮತಿ ಸುವರ್ಣಾ ಕೊಟ್ರಣ್ಣವರ** ವಂದಿಸಿದರು.


ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
ಬಾಗಲಕೋಟ
ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ
2024
'ಸ್ಫೂರ್ತಿದಾಯಕ ಪ್ರೇರಣೆಗಳು'
ಸರ್ವರಿಗೂ ಸುಸ್ವಾಗತ
2024 03 12 12:00








2024 03 12 11:42



************